ಕಲಾತ್ಮಕ ಸ್ಮಾರಕಗಳನ್ನು ಹೊಂದಿದ ಗದಗ ಜಿಲ್ಲೆಯ ಡಂಬಳಕ್ಕೆ ಒಮ್ಮೆ ಹೋದರೆ, ಮತ್ತೆ ಮತ್ತೆ ಹೋಗಬೇಕೆನ್ನಿಸುವುದು ಸುಳ್ಳಲ್ಲ.

ಚಿತ್ರ – ಲೇಖನ: **ವೆಂಕಟೇಶಪ್ರಸನ್ನ ಎಚ್.ಎಂ.**



ದೊಡ್ಡಬಸಪ್ಪ ದೇವಾಲಯದ ಸೂಕ್ಷ್ಮ ಕೆತ್ತನೆಗಳುಳ್ಳ ಶಿಖರ



ನಕ್ಷತ್ರಾಕಾರ ಹೊರಭಿತ್ತಿ ಮತ್ತು ಕೀರ್ತಿಮುಖ, ಚಿಕಣಿ ಶಿಖರ ಕೆತ್ತನೆಗಳು

ಹನ್ನೊಂದು ಮತ್ತೆ ಹನ್ನೆರಡನೇ ಶತಮಾನಗಳಲ್ಲಿ ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಕಟ್ಟಲ್ಪಟ್ಟ ಮತ್ತು ಪಶ್ಚಿಮ ಚಾಲುಕ್ಯ ವಾಸ್ತುಶಿಲ್ಪವನ್ನು ನೆನಪಿಸುವ ಹಲವು ದೇಗುಲಗಳು ಗದಗ ಜಿಲ್ಲೆಯಲ್ಲಿವೆ. ಇವುಗಳಲ್ಲಿ ಎಲೆಮರೆಯ ಕಾಯಿಯಂತಿರುವ ಡಂಬಳದ ದೊಡ್ಡಬಸಪ್ಪ ದೇವಾಲಯವೂ ಒಂದು.

ಮುಂಡರಗಿ ತಾಲ್ಲೂಕಿಗೆ ಸೇರುವ ಡಂಬಳ ಪುಟ್ಟ ಹಳ್ಳಿ. ಗದಗಿನಿಂದ ಸುಮಾರು ಇಪ್ಪತ್ತು ಕಿಲೋಮೀಟರ್ ದೂರದಲ್ಲಿದೆ. ಆದರೆ ಇದೇ ಡಂಬಳ ಚಾಲುಕ್ಯರ ಕಾಲಕ್ಕೆ ಮಾಸವಾಡಿನಾಡೆಂದು ಕರೆಸಿಕೊಂಡ ಪ್ರದೇಶದ ರಾಜಧಾನಿಯಾಗಿ ಮೆರೆದ ಧರ್ಮಪುರ, ಧರ್ಮೊಳ, ಧರ್ಮವೊಳಲ್ ಎಂದೆಲ್ಲಾ ಹೆಸರು ಮಾಡಿದ್ದ ಮಹಾಪಟ್ಟಣವೂ ಹೌದು. ಆಗಿನ ಕಾಲದ ಧಾರ್ಮಿಕ ಅನ್ಯೋನ್ಯತೆಗೆ ಹಿಡಿದ ಕನ್ನಡಿಯಂತಿದೆ ಇಲ್ಲಿನ ಶಿಲ್ಪಕಲೆ.

ಡಂಬಳ ಮತ್ತು ಆಸುಪಾಸಿನಲ್ಲಿ ದೊರಕಿರುವ ಶಾಸನಗಳ ಪ್ರಕಾರ, ಈ ಹಳ್ಳಿ ಬೌದ್ಧ, ಜೈನ ಮತ್ತು ಹಿಂದೂ ಧರ್ಮಗಳ ಪೋಷಣೆ ಮತ್ತು ಬೆಳವಣಿಗೆಗೆ ಒಂದು ಸಾಕ್ಷಿ. ಕ್ರಿ.ಶ.1059ರ ಶಾಸನದಿಂದ ಡಂಬಳದಲ್ಲಿ ಮೊದಲೇ ಉಪಸ್ಥಿತವಿದ್ದ ಜಿನಾಲಯವೊಂದಕ್ಕೆ ಚಾಲುಕ್ಯ ದೊರೆ ಮೊದಲನೇ ಸೋಮೇಶ್ವರ ದತ್ತಿ ಕೊಟ್ಟಿರುವುದು ಮತ್ತು 1095ರ ಶಾಸನವೊಂದರಂತೆ ಹದಿನಾರು ಜನ ವರ್ತಕರು ಬೌದ್ಧ ದೇವತೆ ತಾರಾದೇವಿಯ ದೇಗುಲವನ್ನು ಕಟ್ಟಲು ಸಹಾಯ ಮಾಡಿರುವುದನ್ನು ಗಮನಿಸಬಹುದಾಗಿದೆ. ಆದರೆ ಆ ದೇಗುಲವಾಗಲೀ, ಬೌದ್ಧ ವಿಹಾರವಾಗಲೀ ಅಥವಾ ಜಿನಾಲಯಗಳಾಗಲೀ ಇಂದು ಡಂಬಳದಲ್ಲಿ ಕಾಣಸಿಗುವುದಿಲ್ಲ.

## ದೊಡ್ಡಬಸಪ್ಪ ದೇವಾಲಯ

ಡಂಬಳಕ್ಕೆ ಕಲಶಪ್ರಾಯವಾಗಿ ಇಂದಿಗೂ ನಿಂತಿರುವುದು ದೊಡ್ಡಬಸಪ್ಪ ದೇವಾಲಯ. ಈ ದೇವಸ್ಥಾನವು ಆಲಯದ ಹೊರಗಿರುವ ದೊಡ್ಡ ನಂದಿಯಿಂದಾಗಿ ಹೆಸರುವಾಸಿಯಾಗಿದ್ದರೂ ಮೂಲತಃ ಅದೊಂದು ಶಿವ ದೇವಾಲಯ. ಚಾಲುಕ್ಯ ದೊರೆ ಆರನೇ ವಿಕ್ರಮಾದಿತ್ಯನ ಕಾಲದಲ್ಲಿ ಸೇನಾನಾಯಕನಾಗಿದ್ದ ಎನ್ನಲಾದ ರೆಬ್ಬರಸ ಮತ್ತು ಬಾಚಿಕಬ್ಬೆಯರ ಮಗ ಅಜ್ಜಯ ಈ ದೇವಾಲಯವನ್ನು ಕಟ್ಟಿಸಿರುವ ಉಲ್ಲೇಖ 1125ರ ಶಾಸನವೊಂದರಲ್ಲಿದೆ. ದೇಗುಲದ ಶಿವಲಿಂಗಕ್ಕೆ 'ಅಜ್ಜಮೇಶ್ವರ'ನೆಂದು ಹೆಸರು ಬಂದಿದ್ದು ಈ ಕಾರಣದಿಂದಲೇ ಇರಬೇಕು.

ಹದಿನಾರು ಜನ ಶ್ರೇಷ್ಠಿಗಳು, ಮಾಸವಾಡಿನಾಡಿನ ಅರಸರು, ಮತ್ತಿತರರು ಹೇರಳವಾಗಿ ದತ್ತಿ ನೀಡಿರುವುದೂ ಶಾಸನದಲ್ಲಿ ದಾಖಲಾಗಿದೆ. ದೇವಾಲಯವು ಕಲ್ಯಾಣಿ ಚಾಲುಕ್ಯರ ಕಾಲದ ಉಳಿದ ದೇಗುಲಗಳಂತೆ ಮುಖಮಂಟಪ, ಒಂದು ವಿಶಾಲವಾದ ನವರಂಗ, ಅಂತರಾಳ ಮತ್ತು ಗರ್ಭಗುಡಿಗಳನ್ನು ಹೊಂದಿದ್ದು, ಅಂತರಾಳದ ಮೇಲೆ ಶುಕನಾಸಿಕ ಮತ್ತು ಗರ್ಭಗುಡಿಯ ಮೇಲೆ ಬಹುಚಿತ್ರಿತ ಶಿಖರವನ್ನು ಹೊಂದಿದೆ. ದೇಗುಲಕ್ಕೆ